# ವಿಧಾನಸೌಧ ಪಶ್ಚಿಮ ದಿಕ್ಕಿನ ನವೀಕೃತ ಪ್ರವೇಶ ದ್ವಾರ ಉದ್ಘಾಟನೆ



ವಿಧಾನಸೌಧದ ಪಶ್ಚಿಮ ದಿಕ್ಕಿನ ನವೀಕೃತ ಪ್ರವೇಶ ದ್ವಾರವನ್ನು ಸಿಎಂ ಸಿದ್ದರಾಮಯ್ಯ ಅವರು ಲೋಕಾರ್ಪಣೆ ಮಾಡಿದರು. ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ. ಪಾಟೀಲ್, ಜಿ.ಪರಮೇಶ್ವರ್, ರಾಮಲಿಂಗಾರೆಡ್ಡಿ, ಎನ್.ಎಸ್. ಬೋಸರಾಜು, ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಇತರರಿದ್ದರು.

# ಉತ್ತರವಿಲ್ಲದ ಅಧಿಕಾರಿಗಳ ವಿರುದ್ಧ ಮತ್ತೆ ಶಾಸಕರ ಕಿಡಿ

## ಅಧಿಕಾರಿಗಳನ್ನು ಕಟಕಟೆಗೆ ಕರೆಸಿ ಛೀಮಾರಿ ಹಾಕಿ ಸಭಾಪತಿಗೆ ಮೇಲ್ಮನೆಯ ಸರ್ವಸದಸ್ಯರ ಒತ್ತಾಯ

■ **ಉದಯವಾಣಿ ಸಮಾಚಾರ**

**ವಿಧಾನ ಪರಿಷತ್ತು:** ಸದನದ ಕಲಾಪಗಳು ಮುಗಿಯುತ್ತಾ ಬಂದರೂ ಈವರೆಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡಿಲ್ಲ. ಹೀಗಾಗಿ, ನಮ್ಮ ಹಕ್ಕುಗಳಿಗೆ ಚ್ಯುತಿಯಾಗಿದೆ. ಉತ್ತರ ನೀಡದ ಅಧಿಕಾರಿಗಳನ್ನು ಕಟಕಟೆಗೆ ಕರೆಯಿಸಿ ಛೀಮಾರಿ ಹಾಕಿ. ಇಲ್ಲವೇ ಅವರನ್ನು ಅಮಾನತುಗೊಳಿಸಬೇಕು ಎಂದು ವಿಧಾನ ಪರಿಷತ್ ಸದಸ್ಯರು ಪಕ್ಷಭೇದ ಮರೆತು ಸಭಾಪತಿ ಹೊರಟ್ಟಿ ಅವರನ್ನು ಆಗ್ರಹಿಸಿದರು.

▶ 8ನೇ ಪುಟಕ್ಕೆ

### ಉತ್ತರಿಸದಿದ್ದರೆ ಕ್ರಮ



“ಮಾ.25ರ ಬುಧವಾರದ ಒಳಗೆ ಅಧಿಕಾರಿಗಳು ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಇಲ್ಲದಿದ್ದರೆ ಅಂಥ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚನೆ ನೀಡುತ್ತೇನೆ.

● **ಬಸವರಾಜ ಹೊರಟ್ಟಿ,** ಸಭಾಪತಿ

# ಉತ್ತರವಿಲ್ಲದ ಅಧಿಕಾರಿಗಳ ವಿರುದ್ಧ ಮತ್ತೆ ಶಾಸಕರ ಕಿಡಿ

**1ನೇ ಪುಟದಿಂದ ▶** ಪ್ರಶ್ನೋತ್ತರ ಕಲಾಪ ಮುಗಿಯುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಭೋಜೇಗೌಡ, 289 ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರ ನೀಡಬೇಕಾಗಿದೆ. ಕೆಳ ಮನೆಯಲ್ಲೂ ಸ್ಪೀಕರ್‌ಅಧಿಕಾರಿಗಳ ದುರ್ವತನೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಇಲ್ಲಿ ಕೂಡ ಅದೇ ವಾತಾವರಣವಿದ್ದು ಉತ್ತರ ಕೊಡಿಸಿ ಎಂದು ಮನವಿ ಮಾಡಿದರು. ಇದಕ್ಕೆ ದನಿಗೂಡಿಸಿದ ಕಾಂಗ್ರೆಸ್‌ನ ಪುಟ್ಟಣ್ಣ, ಸುಧಾಮ್‌ದಾಸ್, ಬಿಜೆಪಿಯ ಸಿ.ಟಿ.ರವಿ ಸೇರಿದಂತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರು, ಮೇಲ್ಮನೆ ಸದಸ್ಯರು ಅಂದರೆ ಅಧಿಕಾರಿಗಳಿಗೆ ಲೆಕ್ಕಕ್ಕೇ ಇಲ್ಲದಂತಾಗಿದೆ. ನೀವು ಉತ್ತರ ಕೊಡಿಸುವ ವಿಚಾರದಲ್ಲಿ ಹೇಳ್ತೀನಿ, ಕೇಳ್ತೀನಿ, ನೋಡ್ತೀನಿ ಎಂದು ಹೇಳಿ ಅಸಹಾಯಕರಾದರೆ ಹೇಗೆ? ಸದಸ್ಯರ ಘನತೆಗೆ ಧಕ್ಕೆಯಾಗುತ್ತಿದೆ. ನೀವು ಸದನದ ನೆರವಿಗೆ ಬರಬೇಕು. ಉತ್ತರ ನೀಡದ ಅಧಿಕಾರಿಗಳನ್ನು ಅಮಾನತು ಮಾಡಿ ಸದನದ ಗೌರವ ಉಳಿಸಿ ಎಂದು ಒಕ್ಕೊರಲಿನಿಂದ ಆಗ್ರಹಿಸಿದರು.

ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬೆಳಗಾವಿ ಅಧಿವೇಶನದಲ್ಲಿ ಕೇಳಿದ್ದ ಪ್ರಶ್ನೆಗಳಿಗೆ ಈವರೆಗೂ ಉತ್ತರ ಬಂದಿಲ್ಲ, ಈಗಲೂ ಹಾಗೇ ಇದೆ. ಹಾಗಿದ್ದರೆ ನಾವೇಕೆ ಸರ್ಕಾರಕ್ಕೆ ಪ್ರಶ್ನೆ ಕೇಳಬೇಕು ಎಂದರು. ಕಾಂಗ್ರೆಸ್‌ನ ಪುಟ್ಟಣ್ಣ, ನೀವು ಅಧಿಕಾರಿಗಳಿಂದ ಉತ್ತರ ಪಡೆಯುವ ವಿಚಾರದಲ್ಲಿ ಅಸಹಾಯಕತೆ ವ್ಯಕ್ತಪಡಿಸದೇ ಆರ್ಡರ್‌ಮಾಡಿ , ನಿಮ್ಮ ಚೇರ್‌ಗೆ ಅಂತಹ ತಾಕತ್ ಇದೆ. ಉತ್ತರ ನೀಡದ ಅಧಿಕಾರಿಗಳನ್ನು ಕಟಕಟೆಗೆ ಕರೆಯಿಸಿ ಎಂದು ಆಗ್ರಹಿಸಿದರು.

ಸಭಾಪತಿ ಹೊರಟ್ಟಿ ಮಾತನಾಡಿ, ಸದಸ್ಯರು ಹೇಳುವುದರಲ್ಲಿ ಅರ್ಥವಿದೆ. ಅಧಿಕಾರಿಗಳು ಉತ್ತರ ನೀಡದೇ ಇದ್ದರೆ ನಾನು ಸದನ ನಡೆಸುವುದು ಹೇಗೆ? ಎಂದು ಸಭಾ ನಾಯಕ ಭೋಸರಾಜ್ ಅವರನ್ನು ಪ್ರಶ್ನೆ ಮಾಡಿದರು. ಬುಧವಾರದ ಒಳಗೆ ಅಧಿಕಾರಿಗಳು ಉತ್ತರ ನೀಡಬೇಕು. ಇಲ್ಲದಿದ್ದರೆ ಕ್ರಮಕ್ಕೆ ಸೂಚನೆ ನೀಡುವುದಾಗಿ ಎಚ್ಚರಿಕೆ ನೀಡಿದರು.

# ಅಸಮರ್ಥ ಸಭಾಪತಿ ಆಗಲಾರೆ!

ಬೆಂಗಳೂರು: ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡಲು ಸತಾಯಿಸುತ್ತಿರುವ ಅಧಿಕಾರಿಗಳ ಧೋರಣೆ ವಿಧಾನ ಪರಿಷತ್ ಕಲಾಪದಲ್ಲಿಯೂ ಪ್ರತಿಧ್ವನಿಸಿತು. 107 ಪ್ರಶ್ನೆಗಳಿಗೆ 57 ಮಾತ್ರ ಉತ್ತರ ನೀಡಲಾಗಿದೆ ಎಂದು ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ವಿಷಯ ಪ್ರಸ್ತಾಪಿಸಿದ್ದೇ ತಡ ಸದನದಲ್ಲಿದ್ದ ಸದಸ್ಯರೆಲ್ಲರೂ ಪಕ್ಷಾತೀತವಾಗಿ ಅಧಿಕಾರಿಗಳ ವಿರುದ್ಧ ಮುಗಿಬಿದ್ದರು. ಕಾಂಗ್ರೆಸ್‌ನ ಪುಟ್ಟಣ್ಣ ಮಾತನಾಡಿ, ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡಲಾಗದ ಅಧಿಕಾರಿಗಳಿಗೆ ನೋಟಿಸ್ ಕೊಟ್ಟು ಸದನದ ಕಟಕಟೆಗೆ ನಿಲ್ಲಿಸಿ, ಕೆಲವರನ್ನು ಅಮಾನತುಗೊಳಿಸಿ ಎಂದು ಆಗ್ರಹಿಸಿದರು.



ಸದಸ್ಯರಿಗೆ ಉತ್ತರ ಕೊಡಿಸಬೇಕಾದ್ದು ಸಭಾಪತಿಗಳ ಜವಾಬ್ದಾರಿ, ನೀವು ಎಷ್ಟೇ ಸೂಚನೆ ನೀಡಿದರೂ ಕೆಲಸ ಮಾಡುತ್ತಿಲ್ಲ ಎಂದಾದರೆ ಅಂತಹ ಅಧಿಕಾರಿಗಳನ್ನು ಕಟಕಟೆಯಲ್ಲಿ ನಿಲ್ಲಿಸಿ ಛೀಮಾರಿ ಹಾಕಿ ಎಂದು ಒತ್ತಾಯಿಸಿದರು. ವಿಪಕ್ಷನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಈ ಅಧಿವೇಶನದ ಪ್ರಶ್ನೆಗಳಿಗೇ ಉತ್ತರ ನೀಡದ ಅಧಿಕಾರಿಗಳು ಹಿಂದಿನ ಅಧಿವೇಶನದ ಪ್ರಶ್ನೆಗಳನ್ನು ಕಸದ ಬುಟ್ಟಿಗೆ ಹಾಕಿ ಕುಳಿತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಧ್ಯ ಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, ನಾನು, ಅಸಹಾಯಕ ಸಭಾಪತಿಯಾಗಿ ಅಸಮರ್ಥ ಎನ್ನಿಸಿಕೊಳ್ಳಲು ಸಾಧ್ಯವಿಲ್ಲ, ನನ್ನದೇ ಆದ ಕ್ರಮಕೈಗೊಳ್ಳುತ್ತೇನೆ, ಸೂಚನೆಯನ್ನು ಗಂಭೀರವಾಗಿ ತೆಗೆದುಕೊಳ್ಳಿ ಎಂದು ಸಭಾ ನಾಯಕರಿಗೆ ಸೂಚಿಸಿದರು. ಯಾವ ಇಲಾಖೆಯಲ್ಲಿ ಎಷ್ಟು ಪ್ರಶ್ನೆಗಳು ಬಾಕಿ ಉಳಿದುಕೊಂಡಿವೆ ಎಂಬ ವರದಿಯೊಂದಿಗೆ ನನ್ನ ಕಚೇರಿಗೆ ಬನ್ನಿ ಚರ್ಚಿಸಿ, ಅಧಿಕಾರಿಗಳಿಗೆ ಏನು ಮಾಡಬೇಕೊ ಅದನ್ನ ಮಾಡೋಣ ಎಂದರು.